ಅತ್ಯಂತ ಮುಖ್ಯ. ಬೆಂಜಮಿನ್ ಇದನ್ನು ಹೇಳಿದ್ದ. ಕೆವಿಎನ್ ಮಾರ್ಕ್ಸ್‌ವಾದದಲ್ಲಿ ಒಂದು ದಾರಿಯನ್ನು ಹಾಕಿಕೊಟ್ಟರು. ಅವರ ವಿರುದ್ಧ ದಿಕ್ಕಿನಲ್ಲಿಯೂ ನಾವು ಸಾಗಬಹುದು ಎನ್ನುವುದು ನನ್ನ ತಿಳಿವಳಿಕೆ.

ಅವರ 'ದೇಶಕಾಲ ಬದ್ಧ' ಎನ್ನುವ ಮಾತನ್ನು ಒಪ್ಪುತ್ತೇನೆ. ಬ್ರೆಕ್ಟ್ ನನ್ನ ಕಾಲದ ಅಗತ್ಯ. ದೇವನೂರು ಕೂಡ ಅವರ ಸಂದರ್ಶನವೊಂದರಲ್ಲಿ ಜ್ಞಾನ ಪ್ರಸ್ಥಾನದ ಬಗ್ಗೆ ಹೇಳುತ್ತಾರೆ. ಅದು ಆಗಿದೆ. ಈಗಲೂ ನಾವು ನಿಜವಾದ ಅರ್ಥದಲ್ಲಿ ಜ್ಞಾನ ಪ್ರಸ್ಥಾನವನ್ನು ರೂಪಿಸುತ್ತಿಲ್ಲ. ಅದರ ಬಗ್ಗೆ ಹೇಳಿದರೆ, 'ಹಾಗೆಂದರೇನು?' ಎಂದು ಕೇಳುವವರು ತುಂಬಾ ಜನ ಇದ್ದಾರೆ. ಯಾವುದೇ ಸಂವಾದವು ಇಲ್ಲದೆ ಹೋದರೆ ಒಂದು ಖಾಲಿಯಾದ ಜಾಗ ಹಾಗೆಯೇ ಉಳಿಯುತ್ತದೆ. ಇದು ಈಗಿನ ಪರಿಸ್ಥಿತಿ.

ಅವರ ಅಪಾರವಾದ ಓದು ಮತ್ತು ಅವರು ಎತ್ತಿಕೊಳ್ಳುವ ಪ್ರಶ್ನೆಗಳು ತುಂಬಾ ಒಳನೋಟಗಳನ್ನು ಹೊಂದಿರುತ್ತವೆ. ಅವರ ಬರಹಗಳ ಬಗ್ಗೆ ಒಂದು ಪುಸ್ತಕವನ್ನು ಬರೆಯುವಷ್ಟು ವಿಚಾರಗಳು ಇವೆ. 'ತೊಂಡುಮೇವು' ಕೃತಿಗಳಲ್ಲಿ ಅವರ ಜ್ಞಾನದ ವಿಸ್ತಾರವನ್ನು ನಾವು ಕಾಣಬಹುದು. ಅವರು ಹೇಳಿರುವುದನ್ನು ಮತ್ತೆ ಇನ್ನೊಂದು ತಲೆಮಾರಿಗೆ ದಾಟಿಸುವ ಜವಾಬ್ದಾರಿ ನಮ್ಮದಾಗಿದೆ. ಅವರ ಮಾತುಗಳನ್ನು ನಾವು ನಿಜವಾಗಿಯೂ ನಿರ್ಲಕ್ಷ್ಯ ಮಾಡಿದ್ದರಿಂದ ಏನಾಯಿತು ಎಂದು ತಾಳ್ಮೆಯಿಂದ ಯೋಚನೆ ಮಾಡಬೇಕು. ಪಂಪನ ದೇಸಿ, ಅನ್ಯಶಿಸ್ತುಗಳ ಬಳಕೆ, ಭಾಷೆಯ ಬಗೆಗೆ ಅವರ ನಿಲುವು, ಚಾಮ್‌ಸ್ಕಿಯ ಬಗ್ಗೆ ಅವರು ಹೇಳಿದ ವಿಚಾರಗಳನ್ನು ನಾವು ಎಳೆಯರಿಗೆ ದಾಟಿಸಬೇಕಾಗಿದೆ. ಭಾಷೆಯ ಬಗ್ಗೆ ಅವರ ವಿಚಾರಗಳನ್ನು ಗಂಭೀರವಾಗಿ ನೋಡಬೇಕಿದೆ.

**–ಕೇಶವ ಶರ್ಮ ಕೆ., ಶಿವಮೊಗ್ಗ**

## ಸಂಪ್ರದಾಯ ಭಂಗ ನಿರಂತರವಾಗಿರಲಿ

**'ಐವತ್ತರ** ಕರ್ನಾಟಕದ ಹೊತ್ತಿನಲ್ಲಿ ನೂರರ ಕನ್ನಡ ವಿಮರ್ಶೆಯ ಸಂಪ್ರದಾಯಭಂಗ' (ಲೇ: ಶಶಿಕುಮಾರ್, ನವೆಂಬರ್ 2023) – ಇತ್ತೀಚಿನ ದಿನಗಳ ಅತ್ಯುತ್ತಮ ಬರಹಗಳಲ್ಲೊಂದು. ಕನ್ನಡ ವಿಮರ್ಶೆ ಪಡೆದುಕೊಂಡ ಅರ್ಥಪೂರ್ಣ ಹೊರಳುದಾರಿಗಳನ್ನು ನೆನಪಿಸುವ ಈ ಬರಹ, ಅದೇ ವೇಳೆಗೆ ಈ ಹೊತ್ತಿನ ವಿಮರ್ಶೆಯ ಜಡತೆಯನ್ನು ನೆನಪಿಸುವ ಕೆಲಸವನ್ನೂ ಮಾಡುತ್ತದೆ. ಬಸವಲಿಂಗಪ್ಪನವರು ಚಾಲ್ತಿಗೆ ತಂದ ಬೂಸಾದ ಪರಿಕಲ್ಪನೆ ಈ ಹೊತ್ತಿಗೆ ಹೆಚ್ಚು ಹೊಂದುವಂತಹದ್ದು. ಬರೆಯಲಿಕ್ಕೆ ವೇದಿಕೆಗಳೇನೋ ಹೆಚ್ಚಾಗಿವೆ. ಆದರೆ, ಬರಹದ ಗುಣಮಟ್ಟ ಹೇಗಿದೆ? ವಿಮರ್ಶಾ ರಾಹಿತ್ಯ ಸ್ಥಿತಿ ಸಾಹಿತ್ಯಕ್ಕೂ ಒಳ್ಳೆಯದಲ್ಲ; ಲೇಖಕರ ಬೆಳವಣಿಗೆಗೂ ಒಳ್ಳೆಯದಲ್ಲ. ನಿಷ್ಠುರ ವಿಮರ್ಶೆ ಇಲ್ಲದಿದ್ದಾಗ ರೂಪುಗೊಳ್ಳುವ ಹೊಗಳುಭಟ್ಟರಿಂದ ಸಮಾಜಕ್ಕೆ ಯಾವುದೇ ಉಪಯೋಗವಿಲ್ಲ. ಕೆ.ವಿ. ನಾರಾಯಣ್ ಅವರ ಸಂದರ್ಶನವೂ ಪ್ರಸಕ್ತ ವಿಮರ್ಶಾ ರಾಹಿತ್ಯ ಸ್ಥಿತಿಯನ್ನೇ ಮತ್ತೊಂದು ಬಗೆಯಲ್ಲಿ ಹೇಳುತ್ತಿದೆ ಎನ್ನಿಸಿತು. ಚರ್ಚೆಗೆ ಆಸ್ಪದ ನೀಡುವ ಇಂಥ ಬರಹಗಳು 'ಮಯೂರ'ದಲ್ಲಿ ನಿರಂತರವಾಗಿರಲಿ.

**–ಕನ್ನಡ ರಾಮ್, ಬೆಂಗಳೂರು**

**'ಯಾವುದೇ** ಸ್ಥಿತಿ ಸಂವಾದರಹಿತ ಆಗಿರಬೇಕಾಗಿಲ್ಲ. ಪ್ರಶ್ನೆ ಮಾಡೋದು ಅಂದ್ರೆ ವಿರೋಧ ಅಂತಲ್ಲ' ವಿಮರ್ಶಕ, ಭಾಷಾ ವಿಜ್ಞಾನಿ ಕೆ.ವಿ. ನಾರಾಯಣ ಅವರು ಈ ಸಂದರ್ಶನದಲ್ಲಿ ಬರಹಗಾರರ, ಲೇಖಕರ, ಕಥೆ–ಕಾದಂಬರಿಗಾರರ ಕಣ್ಣು ತೆರೆಸುವ ಅಭಿಪ್ರಾಯಗಳನ್ನು ಬಹಳ ಮುಕ್ತವಾಗಿ, ಅಷ್ಟೇ ನಿರ್ಭಿಡೆಯಿಂದ ದಾಖಲಿಸಿದ್ದಾರೆ. ವಿಮರ್ಶೆ ಎಂದರೆ ನಮ್ಮವರು ನಮ್ಮ ಬೆನ್ನು ಚಪ್ಪರಿಸುವ ಒಂದು ವೇದಿಕೆ ಎಂದೇ ಪರಿಭಾವಿಸಿರುವ ಬರಹಗಾರರು ನಿಜವಾದ ವಿಮರ್ಶೆ ಏನು ಎನ್ನುವುದನ್ನು ತಿಳಿದುಕೊಳ್ಳುವಂತಹ ಅಂಶಗಳು ಇದರಲ್ಲಿವೆ.

'ಮಾರ್ಕ್ಸಿಸಂ ಬಗ್ಗೆ ಬಹಳ ನಿರ್ಲಕ್ಷ್ಯ ಇರಬಹುದಾದ ರೈಟರ್ ಕೂಡ ಅದ್ಭುತವಾದ ಮಾರ್ಕ್ಸಿಸ್ಟ್ ಕೃತಿ ಬರೀಬಹುದು' ಎನ್ನುವ ಅವರ ವಿಭಿನ್ನ ನಿಲುವು ಓದುಗರನ್ನು ಹತ್ತುಹಲವು ರೀತಿಯಲ್ಲಿ ಚಿಂತನೆಗೆ ಹಚ್ಚುತ್ತದೆ. ಈ ಸಂಚಿಕೆಯನ್ನು ಸಂಗ್ರಹಿಸಿಟ್ಟುಕೊಂಡು, ನಮಗೆ ಅಗತ್ಯ ಬಿದ್ದಲ್ಲಿ ಇಲ್ಲಿನ ಅನೇಕ ಕಟುಸತ್ಯಗಳನ್ನು ಉಲ್ಲೇಖಿಸಬಹುದು.

**–ಅನುಪಮಾ ಸುರೇಶ್, ಧಾರವಾಡ**